SC 6/2024
PW.17

**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ಉಡುಪಿ ಜಿಲ್ಲೆ , ಉಡುಪಿ.**

**ಸೆಷನ್ಸ್ ಕೇಸ್ ನಂಃ 6/2024** **ಫ್ರಾ.ಸಾ.17**

**ಚಾ.ಸಾ.84**

| | | |
|---|---|---|
| ಸಾಕ್ಷಿದಾರರ ಹೆಸರು | - | ಮುಸ್ತಾಕ್ ಕುದ್ರು |
| ತಂದೆಯ ಹೆಸರು | - | ಯೂಸುಫ್ ಸಾಹೇಬ್ |
| ವಯಸ್ಸು | - | 55 ವರ್ಷ |
| ಉದ್ಯೋಗ | - | ವ್ಯವಹಾರ |
| ವಿಳಾಸ | - | ಹೂಡೆ. |

ದಿನಾಂಕಃ 08.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದಃ**

ದಿನಾಂಕ 12-11-2023 ರಂದು ನೇಜಾರಿನ ತೃಪ್ತಿ ಲೇಔಟ್ ನಲ್ಲಿ ನೂರ್ ಮಹಮ್ಮದ್ ಅವರ ಮನೆಯಲ್ಲಿ 4 ಜನರ ಕೊಲೆಯಾಗಿದ್ದು ನಾನು ಅಲ್ಲಿಗೆ ಹೋಗಿದ್ದೆ. ಪೊಲೀಸರು ಅಫನಾನ್ ಶವ ಪಂಚನಾಮೆಗೆ ಸಾಕ್ಷಿಯಾಗಿ ಸಹಕರಿಸಲು ನನಗೆ, ಚಾಸಾ.85 ಮತ್ತು ಚಾಸಾ 86 ರವರನ್ನು ಕೇಳಿಕೊಂಡಿರುತ್ತಾರೆ. ನಾವು ಒಪ್ಪಿದ ಕಾರಣ ಪೋಲಿಸರು ನಮಗೆ ನೋಟಿಸ್ ಕೊಟ್ಟಿರುತ್ತಾರೆ. ಸದ್ರಿ ನೋಟೀಸಿಗೆ ನಾನು ಮತ್ತು ಚಾಸಾ.85 ಮತ್ತು 86 ಸಹಿಗಳನ್ನು ಮಾಡಿದ್ದೇವೆ. ಸಾಕ್ಷಿ ತನ್ನ ಸಹಿ ಗುರುತಿಸಿದ್ದು ನೋಟೀಸನ್ನು ನಿಪಿ-72 ಎಂದು, ಸಾಕ್ಷಿಯ ಸಹಿಯನ್ನು ನಿಪಿ-72(ಎ) ಎಂದು ಗುರುತಿಸಲಾಯಿತು. ಪೋಲಿಸರು ನಮ್ಮನ್ನು ಮನೆಯ ಒಳಗೆ ಮಲಗುವ ಕೋಣೆಯಲ್ಲಿದ್ದ ಅಫನಾನ್ ಶವದ ಬಳಿ ಕರೆದುಕೊಂಡು ಹೋದರು. ಆಕೆಯ ಶವ

ಮಂಚಕ್ಕೆ ಹಾಕಿದ್ದ ಹಾಸಿಗೆಯ ಮೇಲೆ ಇತ್ತು. ಆಕೆಯ ಎಡ ಕಿವಿಯಲ್ಲಿ, ಎಡ ಭುಜದಲ್ಲಿ ಮತ್ತು ಬೆನ್ನ ಹಿಂದೆ ಹರಿತವಾದ ಆಯುಧದಿಂದ ಮಾಡಿದ ಗಾಯಗಳು ಇರುವುದು ಕಂಡುಬಂತು. ಶವದ ಮೈಮೇಲೆ ಒಂದು ನೈಟ್ ಡ್ರೆಸ್, ಪ್ಯಾಂಟ್ ಮತ್ತು ಒಳಚಡ್ಡಿ ಇದ್ದವು. ಶವ ಇದ್ದ ಸ್ಥಳದಲ್ಲಿ ರಕ್ತ ಬಿದ್ದಿತ್ತು. ಶವವನ್ನು ನೋಡಿದಾಗ ಆಕೆಯ ಕೊಲೆಯಾಗಿರುವುದು ಕಂಡುಬಂತು.

2. ಮನೆಯ ಹಾಲ್ ಬಳಿ ಆಸೀಮ್ ನ ಶವ ಇತ್ತು. ಡೈನಿಂಗ್ ಹಾಲ್‌ನಲ್ಲಿ ಹಸೀನಾರವರ ಶವ ಇತ್ತು ಮತ್ತು ಪ್ಯಾಸೇಜಿನಲ್ಲಿ ಐನಾಜ್ ನ ಶವ ಇತ್ತು. ಪೋಲಿಸರು ಶವವನ್ನು ಪರಿಶೀಲಿಸಿ ಶವ ಪಂಚನಾಮೆ ಬರೆದು ನನ್ನ ಹಾಗೂ ಚಾಸಾ85 ಮತ್ತು 86 ರವರ ಸಹಿಗಳನ್ನು ಪಡೆದು ಕೊಂಡಿರುತ್ತಾರೆ. ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಶವ ಪಂಚನಾಮೆಯನ್ನು ನಿಪಿ-73 ಎಂದು, ಸಾಕ್ಷಿಯ ಸಹಿಯನ್ನು ನಿಪಿ-73(ಎ) ಎಂದು ಗುರುತಿಸಲಾಯಿತು. ಶವ ಪಂಚನಾಮೆಯ ನಂತರ ಮೃತ ದೇಹವನ್ನು ಪೋಲಿಸ್ ಸಿಬ್ಬಂದಿಯೊಂದಿಗೆ ಶವ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿರುತ್ತಾರೆ. ಶವ ಪಂಚನಾಮೆಯ ಕಾಲದಲ್ಲಿ ಪೋಲಿಸರು ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಒಂದು ಭಾವ ಚಿತ್ರದಲ್ಲಿ ನಾನು ಮತ್ತು ಸಹ ಪಂಚರು ಕಂಡು ಬರುತ್ತೇವೆ. ಸಾಕ್ಷಿ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-74 ರಿಂದ 77 ಎಂದು ಗುರುತಿಸಲಾಯಿತು. ಶವ ಪಂಚನಾಮೆಯ ಸಮಯದಲ್ಲಿ ಚಾಸಾ41 ಮತ್ತು 42 ಸಹಾ ಇದ್ದರು. ಚಾಸಾ41 ಮೃತರ ಸಂಬಂಧಿ.

3. ಮೃತ ದೇಹದ ಮೇಲೆ ಇದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ತೆರೆದ ನ್ಯಾಯಾಲಯದಲ್ಲಿ ಪ್ಯಾಕ್ ಮಾಡಿ ಸೀಲು ಮಾಡಲಾಗಿದ್ದ ಮೂರು ಬಟ್ಟೆಗಳನ್ನು ತೆಗೆದು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಶರ್ಟ್, ಪ್ಯಾಂಟ್, ಒಳಚಡ್ಡಿಗಳನ್ನು ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ

ಮುದ್ದೆಮಾಲು-20 ರಿಂದ 22 ಎಂದು ಗುರುತಿಸಲಾಯಿತು. ಶವ ಪಂಚನಾಮೆಯನ್ನು ಮಾಡಿದ ಪೋಲಿಸ್ ಅಧಿಕಾರಿಯ ಹೆಸರು ಗುರುನಾಥ ಹಾದಿಮನಿ ಆಗಿರುತ್ತದೆ.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಆರ್.ಪಿ.(LADC) ವಕೀಲರಿಂದ:**

ನಮ್ಮ ಮನೆ ಪಡುತೋನ್ಸೆ ಹೂಡೆಯಲ್ಲಿ ಇರುತ್ತದೆ. ನಮ್ಮ ಮನೆಯಿಂದ ಘಟನಾ ಸ್ಥಳಕ್ಕೆ ಸುಮಾರು 3½ ಕಿ.ಮೀ. ಆಗುತ್ತದೆ. ತೃಪ್ತಿ ಲೇಔಟ್‌ನಲ್ಲಿ ಆಗಿರುವ ಘಟನೆಯ ಬಗ್ಗೆ ಮಧ್ಯಾಹ್ನ 3 ಗಂಟೆ ಸಮಯದಲ್ಲಿ ಗೊತ್ತಾಯಿತು, ಆಗ ನಾನು ಮನೆಯಲ್ಲಿದ್ದೆ. ನಾನು ಒಬ್ಬನೇ ಸ್ಥಳಕ್ಕೆ ಹೋಗಿದ್ದೆ. ಸ್ಥಳ ತಲುಪಿದಾಗ ಮಧ್ಯಾಹ್ನ 3-15 ಗಂಟೆ ಆಗಿತ್ತು. ಸ್ಥಳದಲ್ಲಿ ಸುಮಾರು 30-40 ಸಾರ್ವಜನಿಕರು ಸೇರಿದ್ದರು. ಚಾಸಾ.85 ಮತ್ತು 86 ರವರ ಹೆಸರು ಗೊತ್ತು. ಅವರು ಸ್ಥಳಕ್ಕೆ ಎಷ್ಟು ಹೊತ್ತಿಗೆ ಬಂದಿದ್ದಾರೆ ಗೊತ್ತಿಲ್ಲ. ಅವರು ನನ್ನ ಪರಿಚಯಸ್ಥರು. ನಾನು ಅವರನ್ನು ಶವ ಪಂಚನಾಮೆಯ ಸಮಯದಲ್ಲಿ ಭೇಟಿಯಾಗಿರುತ್ತೇನೆ. ಅಫನಾನ್ ಮರಣದ ಪೂರ್ವದಲ್ಲಿ ಆಕೆಯ ಪರಿಚಯ ನನಗೆ ಇರಲಿಲ್ಲ. ಸುಲೇಮಾನ್ ರವರು ಅಫನಾನ್ ನ ಶವ ತೋರಿಸಿರುತ್ತಾರೆ. ಶವ ಪಂಚನಾಮೆಯ ಸಮಯದಲ್ಲಿ ನಾವು 5 ಜನ ಮತ್ತು ಮೂರು ಜನ ಪೋಲಿಸರು ಸೇರಿ ಒಟ್ಟು 8 ಜನ ಇದ್ದು ಶವ ಪಂಚನಾಮೆ ಯಲ್ಲಿ ಭಾಗವಹಿಸಿದ್ದೆವು. ಶವ ಪಂಚನಾವೆಯ ಸ್ಥಳದಲ್ಲಿ ಚಾಸಾ-1, 2 ಮತ್ತು 6 ಇರಲಿಲ್ಲ. ನಿಪಿ-73 ರಲ್ಲಿ ಅಫನಾನ್ ಜೀವಂತ ಇದ್ದಾಗ ಕೊನೆಯ ಬಾರಿ ಮತ್ತು ಆಕೆಯ ಶವವನ್ನು ಮೊದಲ ಬಾರಿ

ಯಾರು ನೋಡಿದ್ದಾರೆ ಎಂದು ಬರೆದಿದ್ದಾರೆ. ಷದ್ರಿ ಮಾಹಿಯನ್ನು ಕೊಟ್ಟವರ ಬಗ್ಗೆ ನಿಪಿ-73 ರಲ್ಲಿ ಬರೆದಿದ್ದಾರೆ.

2. ನಾವು 8 ಜನ ಅಫನಾನ್ ಶವದ ಬಳಿ ಇದ್ದೆವು. ಅಲ್ಲಿಗೆ ಬೇರೆ ಜನರು ಬಂದು ಹೋಗುತ್ತಿದ್ದರು. ಮನೆಯ ಒಳಗೆ ಮಲಗುವ ಕೋಣೆಗೆ ಹೋಗುವ ಮಧ್ಯದಲ್ಲಿ ಉಳಿದ ಶವಗಳು ಕಾಣುತ್ತಿದ್ದವು. ಮನೆಯ ತುಂಬಾ ರಕ್ತ ಆಗಿರಲಿಲ್ಲ, ಆದರೆ ಶವಗಳ ಬಳಿ ರಕ್ತ ಬಿದ್ದಿತ್ತು. ಅಫನಾನ್‌ನ ಬಟ್ಟೆಗಳನ್ನು ಸರಿಸಿ ಗಾಯಗಳನ್ನು ನೋಡಿದ್ದೇವೆ, ಆದರೆ ಬಟ್ಟೆಗಳನ್ನು ಸಂಪೂರ್ಣ ತೆಗೆದು ಗಾಯಗಳನ್ನು ಪರಿಶೀಲನೆ ಮಾಡಿಲ್ಲ. ಬಟ್ಟೆಗಳನ್ನು ಸಂಪೂರ್ಣ ತೆಗೆದು ಗಾಯಗಳನ್ನು ಪರಿಶೀಲನೆ ಮಾಡದೇ ಇರುವ ಕಾರಣಕ್ಕೆ ಗಾಯಗಳ ಸ್ವರೂಪ ಮತ್ತು ಅವುಗಳು ಯಾವ ರೀತಿ ಆಗಿವೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ಶವ ಪಂಚನಾಮೆಯ ಸಮಯದಲ್ಲಿ ವೆಜ್ಞಾನಿಕ ಅಧಿಕಾರಿಗಳು ಬಂದಿದ್ದರು. ಅವರು ಎಷ್ಟು ಜನ ಇದ್ದರು ಎಂದು ಸರಿಯಾಗಿ ಗೊತ್ತಿಲ್ಲ, ಅಂದಾಜು ಆರು ಜನ ಇರಬಹುದು. ವೈಜ್ಞಾನಿಕ ಅಧಿಕಾರಿಗಳು ಮಹಜರು ಸಮಯದಲ್ಲಿ ಬಂದಿರುತ್ತಾರೆ. ಮಹಜರು ಮುಗಿಯುವರೆಗೂ ಅಧಿಕಾರಿಗಳು ಸ್ಥಳದಲ್ಲಿ ಇದ್ದರು.ತಕ್ಷೀರು ಮನೆಯ ಹಿಂಬಾಗಿಲನ್ನು ನಾನು ಗಮನಿಸಿಲ್ಲ. ಪೋಲಿಸರು ಶವವನ್ನು ಪರಿಶೀಲಿಸಿ ಶವ ಪಂಚನಾಮೆ ಬರೆದಿದ್ದಾರೆ, ಮಾಹಿತಿ ನಾನು ಕೊಟ್ಟಿಲ್ಲ. ಶವ ಪಂಚನಾಮೆಯ ಕಾಲದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಪಡೆದಿಲ್ಲ.

3. ಘಟನೆ ಬೆಳಿಗ್ಗೆ 8-30 ಅಥವಾ 9-00 ಗಂಟೆಗಳ ಒಳಗೆ ಆಗಿರಬಹುದು. ಅದನ್ನು ನಿಪಿ-73 ರಲ್ಲಿ ನಮೂದಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಲ್ಪೆ ಠಾಣೆಗೆ ನಾನು ಹೋಗಿಲ್ಲ. ತಕ್ಷೀರು ಮನೆಯಲ್ಲಿ ನಾನು ಮಧ್ಯಾಹ್ನ 3-15 ರಿಂದ ಸಂಜೆ 6-00 ಗಂಟೆಯವರೆಗೆ ಇದ್ದೆ. ನನ್ನ ಸಮಕ್ಷಮ ನಿಪಿ-73 ಶವ ಪಂಚನಾಮೆಯನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ನಿಪಿ-73 ಕ್ಕೆ ನಾನು ಮಲ್ಪೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಮುದ್ದೆಮಾಲು ಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲು-20 ರಿಂದ 22 ನ್ನು ಈ ದಿನವೇ ಮೊದಲು ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಭಾವಚಿತ್ರವನ್ನು ತೆಗೆದ ಅಧಿಕಾರಿಯ ಹೆಸರು ಗೊತ್ತಿಲ್ಲ. ಭಾವಚಿತ್ರಗಳನ್ನು ಯಾವ ಸಾಧನದಿಂದ ತೆಗೆದಿದ್ದಾರೆ ಗಮನನಿಸಿಲ್ಲ. ನಿಪಿ-74 ರಿಂದ 77 ನೈಜ ಭಾವಚಿತ್ರಗಳು ಅಲ್ಲ ಎಂದರೆ ಸರಿಯಲ್ಲ. ಮೃತರ ಕುಟುಂಬದವರಿಗೆ ಸಹಾಯ ಮಾಡುವ ಉದ್ದೇಶದಿದಿಂದ ಪೋಲಿಸರು ತಿಳಿಸಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.